2017 ಕ.ತೀ.ವ 45

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್

ಸಿ. ವಲ್ಲಿ ನಾರಾಯಣ್ –ವಿರುದ್ಧ– ಸಿ. ವಿನೋದ್ ಹಯಗ್ರೀವ್ ಮತ್ತು ಇತರರು*

ನ್ಯಾಯಾಂಗ ನಿಂದನೆ ಅಧಿನಿಯಮ, 1971ರ 10, 11 ಮತ್ತು 12ನೇ ಪ್ರಕರಣಗಳು

ಕಂಪನಿ ಅರ್ಜಿ ಸಂ.54/2014ರಲ್ಲಿ ಕಂಪನಿ ಕಾನೂನು ಮಂಡಳಿಯು ಹೊರಡಿಸಿದ ದಿನಾಂಕ 23.09.2014 ಮತ್ತು 18.11.2014ರ ಆದೇಶಗಳನ್ನು ಉಲ್ಲಂಘಿಸಿರುವುದಕ್ಕೆ ಆಪಾದಿತನನ್ನು ದಂಡಿಸುವಂತೆ ದೂರುದಾರರು ಮಾನ್ಯ ಉಚ್ಚ ನ್ಯಾಯಾಲಯವನ್ನು ಕೋರಿ ಸದರಿ ಅಧಿನಿಯಮದ 10, 11 ಮತ್ತು 12ನೇ ಪ್ರಕರಣಗಳ ಅಡಿಯಲ್ಲಿ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಿದ್ದಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಪಕ್ಷಕಾರರ ಅಹವಾಲುಗಳನ್ನು ಆಲಿಸಿ ಮತ್ತು ಪಕ್ಷಕಾರರು ಮುಂದಿಟ್ಟ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳನ್ನು ಪರಿಗಣಿಸಿ, ಉಚ್ಚ ನ್ಯಾಯಾಲಯದ ಅಧೀನ ನ್ಯಾಯಾಲಯಗಳಿಗೆ ಅವುಗಳು ಹೊರಡಿಸಿದ ಆದೇಶಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರವಿದ್ದರೆ, ಸಂಬಂಧಿತ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಪುರಸ್ಕರಿಸುವ ಅಗತ್ಯವಿಲ್ಲವೆಂದು, ಹಾಗೆ ಪುರಸ್ಕರಿಸಿದರೆ ಒಮ್ಮೆಲೆ ಅಂಥ ಅರ್ಜಿಗಳ ಮಹಾಪೂರವೇ ಉಚ್ಚ ನ್ಯಾಯಾಲಯಕ್ಕೆ ಹರಿದು ಬಂದು ಉಚ್ಚ ನ್ಯಾಯಾಲಯದ ಕಾರ್ಯ ಪ್ರಕ್ರಿಯೆಗೆ ಅಡಚಣೆಯುಂಟಾಗುತ್ತದೆಂದು ತಿಳಿಸಿ ವಿಭಾಗೀಯ ಪೀಠವು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿದೆ.

44ನೇ ಕಂಪನಿ ನಿಯಮವು ಕಂಪನಿ ಕಾನೂನು ಮಂಡಲಿಯ ಆದೇಶಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರ ನೀಡಿರುವುದರಿಂದ

*ಸಿಸಿಸಿ ಸಂ. 1235/2015 (ಸಿವಿಲ್), ದಿನಾಂಕ: 29ನೇ ಫೆಬ್ರವರಿ, 2016.

**ಸದರಿ ಅರ್ಜಿಯನ್ನು ಆ ಮಂಡಲಿಯೇ ವ್ಯವಹರಿಸುವುದು ಸೂಕ್ತವೆಂದು ತಿಳಿಸಿ, ನ್ಯಾಯಾಂಗ ನಿಂದನೆ ಅರ್ಜಿಯನ್ನು ವಿಲೆ ಮಾಡಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2015)1 ಎಸ್‌ಸಿಸಿ 451*
*ಇ. ಬಪಣಯ್ಯ –ವಿರುದ್ಧ–*
*ಕೆ.ಎಸ್.ರಾಜು ಮತ್ತು ಇತರರು (ಉಲ್ಲೇ) 5*

*2. 2012(3) ಸಿಟಿಸಿ 524*
*ನ್ಯೂ ಬ್ರಿಡ್ಜ್ ಹೋಲ್ಡಿಂಗ್ಸ್ ಬಿ.ವಿ. –ವಿರುದ್ಧ–*
*ಟಿಟಿಕೆ–ಎಲ್‌ಐಜಿ ಲಿಮಿಟೆಡ್ (ಉಲ್ಲೇ) 9*

*3. (2007) 140 ಕಂಪನಿ. ಮೊಕದ್ದಮೆಗಳು 412*
*ಎನ್. ವೆಂಕಟಸ್ವಾಮಿ ನಾಯ್ಡು –ವಿರುದ್ಧ–*
*ಮೆ।। ಶ್ರೀ ಸೂರ್ಯ ತೇಜ ಕನ್‌ಸ್ಟ್ರಕ್ಷನ್ಸ್*
*ಪ್ರೈವೇಟ್ ಲಿಮಿಟೆಡ್, ಗಾಂಧಿನಗರ ಮತ್ತು ಇತರರು (ಉಲ್ಲೇ) 9*

ದೂರುದಾರರ ಪರ: ಮೆ: ಕೀಸ್ಟೋನ್ ಪಾರ್ಟ್‌ನರ್ಸ್ ಪರ ಶ್ರೀ ಅರುಣ್, ಶ್ರೀ ಕುಮಾರ್ ಪರವಾಗಿ ಶ್ರೀ ಶ್ರೀನಿವಾಸ ರಾಘವನ್, ನ್ಯಾಯವಾದಿ

1 ರಿಂದ 6 ರ ವರೆಗಿನ ಆಪಾದಿತರ ಪರ: ಶ್ರೀ ಜಾನಕೆರೆ ಸಿ. ಕೃಷ್ಣ ಪರವಾಗಿ ಶ್ರೀ ನೌಕೇಶ್ ಬಾತ್ರಾ, ನ್ಯಾಯವಾದಿ.

7ನೇ ಆಪಾದಿತರ ಪರ: ಶ್ರೀಮತಿ ಗಾಯತ್ರಿ ಬಾಲು, ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್ :**

ಈ ನ್ಯಾಯಾಂಗ ನಿಂದನೆ ಅರ್ಜಿಯನ್ನು, ಕಂಪನಿ ಅರ್ಜಿ ಸಂಖ್ಯೆ 54/ 2014 ರಲ್ಲಿ ಕಂಪನಿ ಕಾನೂನು ಮಂಡಲಿಯು ಹೊರಡಿಸಿದ ದಿನಾಂಕ: 23.09.2014 ಮತ್ತು 18.11.2014 ರ ಆದೇಶಗಳನ್ನು ಉಲ್ಲಂಘಿಸಲಾಗಿದೆಯೆಂದು ದೂರಿ, ಸಲ್ಲಿಸಲಾಗಿದೆ.

2. ಕಂಪನಿ ಕಾನೂನು ಮಂಡಲಿಯು ದಿನಾಂಕ 23.9.2014 ರ ಆದೇಶದ ಮೂಲಕ ಒಂದು ತಾತ್ಕಾಲಿಕ ಪರಿಹಾರವನ್ನು ನೀಡಿತ್ತು. ಸದರಿ ಆದೇಶವು ದಿನಾಂಕ 18.11.14 ರ ಆದೇಶದ ಮೂಲಕ ಮುಂದಿನ ಆದೇಶ ನೀಡುವವರೆಗೆ ಮುಂದುವರಿದಿತ್ತು. ಅಂತೆಯೇ ನಮ್ಮ ಉದ್ದೇಶಕ್ಕಾಗಿ ಸಂಬಂಧಪಟ್ಟ ಆದೇಶವನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ:

> *"ಎದುರುದಾರ ಸಂ.1–ಕಂಪನಿಯ ಯಾವುದಾದರೂ ವ್ಯವಹಾರಗಳು ಇದ್ದರೆ ಆ ವ್ಯವಹಾರವನ್ನು 10ನೇ ಸಂಖ್ಯೆಯ ಎದುರುದಾರ ಕಂಪನಿಗೆ ಅಥವಾ ಯವುದೇ ಇತರ ಕಂಪನಿಗೆ ನೇರವಾಗಿ ಅಥವಾ ಪರೋಕ್ಷವಾಗಿ ವರ್ಗಾಯಿಸುವುದರಿಂದ ಎದುರುದಾರನ್ನು 19.11.2014 ರವರೆಗೆ ಈ ಮೂಲಕ ನಿರ್ಬಂದಿಸಲಾಗಿದೆ."*

ಈ ಆದೇಶವನ್ನು ಉಲ್ಲಂಘಿಸಲಾಗಿದೆ ಎಂದು ದೂರಿ, ಈ ಅರ್ಜಿಯನ್ನು ನ್ಯಾಯಾಂಗ ನಿಂದನೆ ಅಧಿನಿಯಮ, 1971 ರ ಉಪಬಂಧಗಳ ಅಡಿಯಲ್ಲಿ ಸಲ್ಲಿಸಲಾಗಿದೆ.

3. ನ್ಯಾಯಾಂಗ ನಿಂದನೆ ಅರ್ಜಿಯ ಊರ್ಜಿತತೆಗೆ ಸಂಬಂಧಿಸಿದಂತೆ ನಾವು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ್ದೇವೆ.

4. ದೂರುದಾರರ ಪರ ಮಾನ್ಯ ನ್ಯಾಯವಾದಿಯು ಈ ಮುಂದಿನಂತೆ ವಾದಿಸಿದ್ದಾರೆ. ಮಂಡಲಿಯ ಆದೇಶಗಳನ್ನು ಪಾಲಿಸದ ವ್ಯಕ್ತಿಯ ವಿರುದ್ಧ ವ್ಯವಹರಣೆ ಕೈಗೊಳ್ಳಲು ಕಂಪನಿಗಳ ಅಧಿನಿಯಮ, 1956 ರಲ್ಲಿ ಯಾವುದೇ ನಿರ್ದಿಷ್ಟ ಉಪಬಂಧವಿಲ್ಲ. ಆದರೆ, ಕಂಪನಿ ಕಾನೂನು ಮಂಡಳಿಯ ಆದೇಶಗಳ ಜಾರಿಯ ಬಗ್ಗೆ ಉಪಬಂಧಿಸುವ 634ಎ ಪ್ರಕರಣವು ಅಂತಿಮ ಆದೇಶಗಳ ಸಂಬಂಧವಾಗಿ ಮಾತ್ರ ವ್ಯವಹರಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಕಂಪನಿಗಳ (ಎರಡನೆ ತಿದ್ದುಪಡಿ) ಅಧಿನಿಯಮ, 2002 ರ ಮೂಲಕ ಸದರಿ ಪರಂತುಕವನ್ನು ಅನ್ವಯವಾಗದಿರುವಂತೆ ಮಾಡಲಾಗಿದೆ. ಅದಕ್ಕೆ ಪ್ರತಿಯಾಗಿ, **ಕಂಪನಿ ಕಾನೂನು ಮಂಡಲಿ ವಿನಿಯಮಗಳು, 1991 ರ 47ನೇ ವಿನಿಯಮವು** ಒಂದು ನ್ಯಾಯಪೀಠದ

ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ ವ್ಯಕ್ತಿಯನ್ನು ಪ್ರಾಸಿಕ್ಯುಷನ್ ಮಾಡುವ ಅಥವಾ ದಂಡನೆ ಮಾಡುವ ಉದ್ದೇಶಕ್ಕಾಗಿ ಆ ನ್ಯಾಯಪೀಠವೇ ಒಂದು ನ್ಯಾಯಾಲಯವೆಂದು ಅಥವಾ ಕಾನೂನುಬದ್ಧ ಪ್ರಾಧಿಕಾರವೆಂದು ಭಾವಿಸತಕ್ಕದ್ದೆಂದು ಘೋಷಿಸಿದೆ. ಹಾಗಾಗಿ ನ್ಯಾಯಾಂಗ ನಿಂದನೆ ಅಧಿನಿಯಮ, 1971 ರ ಉಪಬಂಧಗಳ ಅಡಿಯಲ್ಲಿ ಈ ನ್ಯಾಯಾಲಯದ ಮುಂದೆ ಸಲ್ಲಿಸಲಾದ ಈ ಅರ್ಜಿಯು ಸಮರ್ಥನೀಯವಾದುದಾಗಿದೆ ಎಂದು ಅವರು ವಾದಿಸಿದ್ದಾರೆ.

5. ಆ ವಾದಕ್ಕೆ ಪ್ರತಿಯಾಗಿ, ಎದುರುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಯು ಈ ಮುಂದಿನಂತೆ ವಾದಿಸಿದ್ದಾರೆ: ನ್ಯಾಯಾಲಯ ಆದೇಶವನ್ನು ಪಾಲಿಸದಿರುವುದಕ್ಕಾಗಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ದೂರುದಾರರು ಕಂಪನಿ ಕಾನೂನು ಮಂಡಲಿಯ ಮುಂದೆ ಸಿ.ಎ.ಸಂ.1 ಮತ್ತು ಸಿ.ಎ.ಸಂ.7 ಅರ್ಜಿಗಳನ್ನು ಸಲ್ಲಿಸಿದ್ದಾರೆ. ಆದ್ದರಿಂದ ದೂರುದಾರರು ನ್ಯಾಯಾಧಿಕರಣದ ಮುಂದೆಯೇ ಪರಿಹಾರ ಪಡೆಯುತ್ತಿರುವುದರಿಂದ ಈ ನ್ಯಾಯಾಲಯವು ನ್ಯಾಯಾಂಗ ನಿಂದನೆ ಅರ್ಜಯನ್ನು ಪುರಸ್ಕರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಅವರು ವಾದಿಸಿದ್ದಾರೆ. ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಯು ತಮ್ಮ ವಾದಕ್ಕೆ ಬೆಂಬಲವಾಗಿ ಹಲವಾರು ತೀರ್ಪುಗಳನ್ನು ಅವಲಂಬಿಸಿದ್ದಾರೆ. ಆ ತೀರ್ಪುಗಳಲ್ಲಿ ***ಇ. ಬಪಣಯ್ಯ –ವಿರುದ್ಧ– ಕೆ.ಎಸ್.ರಾಜು ಮತ್ತು ಇತರರು***[1] ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪು ಕೂಡ ಒಂದಾಗಿದ್ದು ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ನಿರ್ಣಯಿಸಿದೆ:

> *"28. ಪ್ರಸ್ತುತ ಮೊಕದ್ದಮೆಯು ಕಂಪನಿ ಕಾನೂನು ಮಂಡಲಿಗೆ ಬರೆದುಕೊಟ್ಟ ಮುಚ್ಚಳಿಕೆಯನ್ನು ಉಲ್ಲಂಘಿಸಿರುವ ಸಿವಿಲ್ ನಿಂದನೆಗೆ ಸಂಬಂಧಪಟ್ಟದ್ದಾಗಿದೆ. ಸಾಮಾನ್ಯವಾಗಿ, ಉಚ್ಚ ನ್ಯಾಯಾಲಯಗಳು, ತಮ್ಮ ಆದೇಶಗಳು ಮತ್ತು ಡಿಕ್ರಿಗಳನ್ನು ಜಾರಿಗೊಳಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ ಉಪಬಂಧಗಳಿವೆ ಎಂಬ*

1. (2015)1 ಎಸ್‌ಸಿ 451

> *ಸರಳ ಕಾರಣಕ್ಕಾಗಿ ತಮ್ಮ ಅಧೀನ ನ್ಯಾಯಾಲಯಗಳು ಹೊರಡಿಸಿದ ಆದೇಶಗಳನ್ನು ಪಾಲಿಸುವಂತೆ ಪಕ್ಷಕಾರರನ್ನು ಒತ್ತಾಯಿಸುವುದಕ್ಕಾಗಿ ನ್ಯಾಯಾಂಗ ನಿಂದನೆ ಅಧಿನಿಯಮದ ಅಡಿಯಲ್ಲಿ ರಚಿಸಿದ ಉಪಬಂಧಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ. ಕಾನೂನಿನ ಸುಸ್ಥಾಪಿತವಾದ ತತ್ವವೇನೆಂದರೆ, ವಿಶೇಷ ಕಾನೂನು ಮತ್ತು ಸಾಮಾನ್ಯ ಕಾನೂನು ಎರಡೂ ಇದ್ದಲ್ಲಿ, ಸಾಮಾನ್ಯ ಕಾನೂನಿನ ಮೇಲೆ ವಿಶೇಷ ಕಾನೂನು ಚಾಲ್ತಿಯಲ್ಲಿರುತ್ತದೆ ಎಂಬುದಾಗಿದೆ. ಹಾಗಾಗಿ, ಸಾಮಾನ್ಯ ಪರಿಸ್ಥಿತಿಗಳಲ್ಲಿ ಡಿಕ್ರಿದಾರನು ನ್ಯಾಯಾಂಗ ನಿಂದನೆ ಅಧಿನಿಯಮವನ್ನು ಆಶ್ರಯಿಸಲಾಗದು ಇಲ್ಲದಿದ್ದರೆ ನ್ಯಾಯಾಂಗ ನಿಂದನೆ ಅಧಿಕಾರ ವ್ಯಾಪ್ತಿಯಲ್ಲಿ ವ್ಯಾಜ್ಯಗಳ ಪ್ರವಾಹದ ದ್ವಾರವನ್ನು ಒಮ್ಮೆಲೆ ತೆರೆದುಬಿಟ್ಟಂತಾಗುವುದು ಖಚಿತ. ಅಧೀನ ನ್ಯಾಯಾಲಯ ಹೊರಡಿಸಿದ ಡಿಕ್ರಿಯನ್ನು ಪಾಲಿಸಿಲ್ಲ ಎಂಬ ಕಾರಣ ಮಾತ್ರಕ್ಕಾಗಿ ಡಿಕ್ರಿದಾರರು ಉಚ್ಚ ನ್ಯಾಯಾಲಯಗಳಿಗೆ ಎಡತಾಕುವುದು ನ್ಯಾಯಾಂಗ ನಿಂದನೆ ಅಧಿನಿಯಮದ ಉದ್ದೇಶವಲ್ಲ. ಆದರೆ ಕಂಪನಿಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2002 ರ ಮೂಲಕ ಕಂಪನಿಗಳ ಅಧಿನಿಯಮ, 1956ಕ್ಕೆ ಪರಂತುಕವನ್ನು ಸೇರ್ಪಡೆಗೊಳಿಸಿದ ನಂತರ ವಿಶೇಷವಾಗಿ ಕಂಪನಿಗಳ ಕಾನೂನು ಮಂಡಲಿ (ಸಿಎಲ್‌ಬಿ)ಯ ಆದೇಶವನ್ನು ಜಾರಿಗೊಳಿಸುವುದಕ್ಕೆ ನಿಯಮಿಸಲಾದಂಥ ಯಾವ ಪ್ರಕ್ರಿಯೆಯೂ ಇಲ್ಲ."*

6. ಆದರೆ ಸರ್ವೋಚ್ಚ ನ್ಯಾಯಲಯವು ಭಾರತ ಸಂವಿಧಾನದ 142 ನೇ ಪ್ರಕರಣದೊಂದಿಗೆ ಓದಿಕೊಂಡಂತೆ 136 ನೇ ಪ್ರಕರಣದ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿಹಾರವನ್ನು ನೀಡಿದೆ.

7. ಉಚ್ಚ ನ್ಯಾಯಾಲಯಕ್ಕೆ ಅಧೀನವಾದ ಒಂದು ಪ್ರಾಧಿಕಾರವು ಹೊರಡಿಸಿದ ಆದೇಶವನ್ನು ಪಾಲಿಸದಿರುವುದಕ್ಕೆ ಕ್ರಮಕೈಗೊಳ್ಳಲು ಅದು ಅಧಿಕಾರ ಹೊಂದಿದ್ದರೆ, ಉಚ್ಚ ನ್ಯಾಯಲಯವು ನ್ಯಾಯಾಂಗ ನಿಂದನೆ ಅಧಿನಿಯಮದ ಉಪಬಂಧಗಳ

ಅಡಿಯಲ್ಲಿ ಅಂಥ ಕ್ರಮವನ್ನು ಕೈಗೊಳ್ಳಲು ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದರೂ ಕೂಡ ಅಂಥ ಅರ್ಜಿಗಳನ್ನು ಉಚ್ಚ ನ್ಯಾಯಾಲಯವು ಪುರಸ್ಕರಿಸಿದರೆ, ಉಚ್ಚ ನ್ಯಾಯಾಲಯಕ್ಕೆ ನ್ಯಾಯಾಂಗ ನಿಂದನೆ ಅಧಿಕಾರ ವ್ಯಾಪ್ತಿಯ ಮೇರೆಗಿನ ವ್ಯಾಜ್ಯಗಳ ಮಹಾಪೂರವೇ ಹರಿದು ಬಂದು ಉಚ್ಚ ನ್ಯಾಯಾಲಯದ ಕಾರ್ಯನಿರ್ವಹಣೆಗೆ ಅಡಚಣೆಯಾಗುವುದರಿಂದ ಉಚ್ಚ ನ್ಯಾಯಾಲಯಗಳು ಆ ಅರ್ಜಿಗಳನ್ನು ಪುರಸ್ಕರಿಸಬಾರದು ಎಂಬುದು ಮೇಲ್ಕಂಡ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಸ್ಪಷ್ಟವಾಗುತ್ತದೆ. ಮೇಲ್ಕಂಡ ತೀರ್ಪಿನಲ್ಲಿ 634 ಎ ಪ್ರಕರಣದ ಉಲ್ಲೇಖವನ್ನು ಮಾಡಲಾಗಿದೆ. ದೂರುದಾರರ ಪರ ಮಾನ್ಯ ನ್ಯಾಯವಾದಿಯು ಕಂಪನಿಗಳ (ಎರಡನೇ ತಿದ್ದುಪಡಿ) ಅಧಿನಿಯಮ 2002 ಅಧಿನಿಯಮ ಸಂ. 2003 ರ 11 ನೇ ಅಧಿನಿಯಮದ ಮೂಲಕ ಸೇರ್ಪಡೆಯಾಗಿದ್ದರೂ ಸದರಿ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿಲ್ಲವೆಂದು ವಾದಿಸಿದ್ದಾರೆ. ಹಾಗಿದ್ದರೆ 634 ಎ ಪ್ರಕರಣವು ಅನ್ವಯವಾಗುತ್ತದೆ.

8. 634 ಎ ಪ್ರಕರಣವು ಅಂತಿಮ ಆದೇಶಗಳಿಗೆ ಮಾತ್ರ ಅನ್ವಯವಾಗುತ್ತದೆಂದು, ಅದು ಮಧ್ಯಂತರ ಆದೇಶಗಳಿಗೆ ಅನ್ವಯವಾಗುವುದಲ್ಲವೆಂದು ವಾದಿಸಲಾಗಿದೆ. ಸದರಿ ವಾದದಲ್ಲಿ ಯಾವುದೇ ಹುರುಳಿರುವುದು ನಮಗೆ ಕಂಡುಬಂದಿಲ್ಲ. ಕಂಪನಿ ಕಾನೂನು ಮಂಡಲಿಗೆ ನ್ಯಾಯಾಲಯವು ಡಿಕ್ರಿಯನ್ನು ಹೊರಡಿಸಿದ್ದಿದ್ದರೆ ಹೇಗೋ ಹಾಗೆ ಅದು ಹೊರಡಿಸಿದ ಆದೇಶಗಳನ್ನು ಜಾರಿಗೊಳಿಸಲು ಸದರಿ ಉಪಬಂಧದಲ್ಲಿ ಅಡಕವಾಗಿರುವ ಹಕ್ಕು ಪ್ರದತ್ತವಾಗಿದ್ದರೆ, ಕಂಪನಿ ಕಾನೂನು ಮಂಡಲಿಯು ಆ ವ್ಯವಹರಣೆಯಲ್ಲಿ ಹೊರಡಿಸಿದ ಆದೇಶಗಳನ್ನು ಮಧ್ಯಂತರ ಆದೇಶಗಳ ರೂಪದಲ್ಲಿಯೂ ಕೂಡ ಜಾರಿಗೊಳಿಸಬಹುದು. ಆದ್ದರಿಂದ ಕಂಪನಿ ಕಾನೂನು ಮಂಡಳಿಯ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಯಲ್ಲಿ ಹೊರಡಿಸಿದ ಮಧ್ಯಂತರ ಆದೇಶವನ್ನು ಜಾರಿಗೊಳಿಸಲು ಅದು ಸ್ವತಂತ್ರವಾಗಿದೆ.

9. ದೂರುದಾರರ ಪರ ಮಾನ್ಯ ನ್ಯಾಯವಾದಿಯು, ನ್ಯಾಯಾಧಿಕರಣವು ಹೊರಡಿಸಿದ ಆದೇಶ ಉಲ್ಲಂಘನೆಗಾಗಿ ದಂಡಿಸುವ ಅಧಿಕಾರ ವ್ಯಾಪ್ತಿಯನ್ನು

ಉಚ್ಚನ್ಯಾಯಾಲಯವು ಹೊಂದಿದೆ ಎಂದು ವಾದಿಸಲು ***ನ್ಯೂ ಬ್ರಿಡ್ಜ್ ಹೋಲ್ಡಿಂಗ್ಸ್ ಬಿ.ವಿ. –ವಿರುದ್ಧ– ಟಿಟಿಕೆ ಎಲ್‌ಐಜಿ ಲಿಮಿಟೆಡ್***[2], ಮೊಕದ್ದಮೆಯಲ್ಲಿನ ಮದ್ರಾಸ್ ಉಚ್ಚ ನ್ಯಾಯಾಲಯದ ತೀರ್ಪನ್ನು ಮತ್ತು ***ಎನ್. ವೆಂಕಟಸ್ವಾಮಿ ನಾಯ್ಡು –ವಿರುದ್ಧ– ಮೆ॥ ಶ್ರೀ ಸೂರ್ಯ ತೇಜ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಗಾಂಧಿನಗರ ಮತ್ತು ಇತರರು***[3], ಮೊಕದ್ದಮೆಯಲ್ಲಿನ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

10. ಮೇಲೆ ತಿಳಿಸಲಾದ ತೀರ್ಪುಗಳನ್ನು ಓದಿದಾಗ ಅದು, ಅಧೀನ ನ್ಯಾಯಾಲಯವು ಹೊರಡಿಸಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗುತ್ತದೆಯೇ ಎಂಬ ಪ್ರಶ್ನೆಯ ಕಡೆಗೆ ಕರೆದೊಯ್ಯುತ್ತದೆ. ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗುತ್ತದೆ ಎಂದಾದರೆ ಆಗ ಸದರಿ ಪ್ರಾಧಿಕಾರವು ನ್ಯಾಯಾಲಯವೆಂದು ಭಾವಿತವಾಗುತ್ತದೆ ಮತ್ತು ಸದರಿ ಪ್ರಾಧಿಕಾರಗಳು ನೀಡಿದ ಆದೇಶಗಳು ಉಲ್ಲಂಘನೆಯಾದರೆ ನ್ಯಾಯಾಂಗ ನಿಂದನೆ ಅಧಿನಿಯಮದ 10ನೇ ಪ್ರಕರಣವು ಅದಕ್ಕೆ ಅನ್ವಯವಾಗುತ್ತದೆ. ಸದರಿ ಕಾನೂನು ಮಾನ್ಯತೆಯನ್ನು ನಾವು ಪ್ರಶ್ನಿಸುತ್ತಿಲ್ಲ. ನ್ಯಾಯಾಂಗ ನಿಂದನೆ ಅರ್ಜಿಯನ್ನು ಪುರಸ್ಕರಿಸುವ ಅಧಿಕಾರವ್ಯಾಪ್ತಿ ಈ ನ್ಯಾಯಾಲಯಕ್ಕೆ ಇದೆಯೆಂದರೂ ಕೂಡ ಆ ವ್ಯಕ್ತಿಯು ನ್ಯಾಯಾಧಿಕರಣವು ನೀಡಿದ ಅಂಥ ಪ್ರಾಧಿಕಾರಗಳ ಆದೇಶಗಳನ್ನು ಜಾರಿಮಾಡುವ ಪರ್ಯಾಯ ಮತ್ತು ಪರಿಣಾಮಕಾರಿ ಪರಿಹಾರವನ್ನು ಹೊಂದಿದ್ದರೆ, ಆ ಅರ್ಜಿಯನ್ನು ಪುರಸ್ಕರಿಸುವುದು ಅಪೇಕ್ಷಣೀಯವೇ ಎಂಬುದು ಇಲ್ಲಿನ ಪ್ರಶ್ನೆಯಾಗಿದೆ. ಮೇಲೆ ತಿಳಿಸಲಾದಂತೆ ಸರ್ವೋಚ್ಚ ನ್ಯಾಯಾಲಯವು, 634ಎ ಪ್ರಕರಣಕ್ಕೆ ಪರಂತುಕವು ಸೇರ್ಪಡೆಯಾಗುವ ಮುಂಚೆ ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಪರಿಣಾಮಕಾರಿಯಾದ ಪರಿಹಾರವು ಲಭ್ಯವಿದ್ದರೆ ಉಚ್ಚ ನ್ಯಾಯಾಲಯವು ಅಂಥ ಅರ್ಜಿಗಳನ್ನು ಪುರಸ್ಕರಿಸಬಾರದು ಎಂದು ಸ್ಪಷ್ಟವಾಗಿ ನೇರವಾದ ನುಡಿಗಳಲ್ಲಿಯೇ ತಿಳಿಸಿದೆ.

2. 2012(3) ಸಿಟಿಸಿ 524

3. (2007) 140 ಕಂಪನಿ ಮೊಕದ್ದಮೆಗಳು 412

11. ನಮ್ಮ ಅಭಿಪ್ರಾಯದಲ್ಲಿ ಬಹುಶಃ 47ನೇ ವಿನಿಯಮವು ಮೇಲ್ಕಂಡ ಮೊಕದ್ದಮೆಗಳಲ್ಲಿ ನೀಡಿದ ತೀರ್ಪುಗಳಿಗೆ ವಿರುದ್ಧವಾದ ಪ್ರತಿಪಾದನೆಯನ್ನು ಹೊಂದಿದ್ದು, ಅದು ಈ ಕೆಳಕಂಡಂತಿದೆ:

> *"**47. ಕೆಲವು ನಿರ್ದಿಷ್ಟ ಉದ್ದೇಶಗಳಿಗಾಗಿ ನ್ಯಾಯಪೀಠವು ನ್ಯಾಯಾಲಯವೆಂದು ಭಾವಿತವಾಗುವುದು** – ಒಂದು ನ್ಯಾಯ ಪೀಠದ ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸುವ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ ಮಾಡುವ ಅಥವಾ ದಂಡನೆ ಮಾಡುವ ಉದ್ದೇಶಕ್ಕಾಗಿ ಆ ನ್ಯಾಯಪೀಠವು ಒಂದು ನ್ಯಾಯಾಲಯವೆಂದು ಅಥವಾ ಕಾನೂನು ಬದ್ಧ ಪ್ರಾಧಿಕಾರವೆಂದು ಭಾವಿತವಾಗತಕ್ಕದ್ದು."*

12. ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ರೂಪದಲ್ಲಿ ಪರಿಹಾರ ಒದಗಿಸುವ ಮೂಲಕ ಯಾವ ಪ್ರಾಧಿಕಾರದ ಆದೇಶಗಳ ವಿರುದ್ಧ ಮೇಲ್ಮನವಿ ಅವಕಾಶವಿದೆಯೋ ಆ ಪ್ರಾಧಿಕಾರವು ನ್ಯಾಯಾಲಯವೆಂಬುದಾಗಿ ಭಾವಿತವಾದರೆ ಈ ವಿನಿಯಮದ ಅವಶ್ಯಕತೆಯೇ ಇಲ್ಲ. ಅದಕ್ಕೆ ಪ್ರತಿಯಾಗಿ ಈ ವಿನಿಯಮವು, ನ್ಯಾಯಪೀಠದ ಯಾವುದೇ ಆದೇಶವನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ ಮಾಡುವ ಅಥವಾ ದಂಡನೆ ಮಾಡುವ ಉದ್ದೇಶಕ್ಕಾಗಿ ಮಂಡಲಿಯು ಒಂದು ನ್ಯಾಯಾಲಯವೆಂಬುದಾಗಿ ಭಾವಿತವಾಗತಕ್ಕದ್ದೆಂದು ಸ್ಪಷ್ಟಪಡಿಸುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮಂಡಲಿಯು ಆದೇಶವನ್ನು ಹೊರಡಿಸಿದ ನಂತರ ಅದನ್ನು ಜಾರಿಗೊಳಿಸುವುದಕ್ಕೆ ಅದು ಒಂದು ನ್ಯಾಯಪೀಠವೆನಿಸಿಕೊಳ್ಳುತ್ತದೆ.

13. 44ನೇ ವಿನಿಯಮವು ಮಂಡಲಿಗೆ ಅಂತರ್ನಿಹಿತ ಅಧಿಕಾರವನ್ನು ಪ್ರದತ್ತಗೊಳಿಸುತ್ತದೆ. ಅದು ಈ ಕೆಳಕಂಡಂತಿದೆ:

> *"**44. ಮಂಡಲಿಯ ಅಂತರ್ನಿಹಿತ ಅಧಿಕಾರವನ್ನು ಉಳಿಸುವಿಕೆ:–** ಈ ನಿಯಮಗಳಲ್ಲಿ ಇರುವುದು ಯಾವುದೂ, ನ್ಯಾಯೋದ್ದೇಶದ*

> *ಈಡೇರಿಕೆಗಾಗಿ ಅಗತ್ಯವಿರುವಂಥ ಆದೇಶಗಳನ್ನು ಮಾಡುವ ಅಥವಾ ನ್ಯಾಯಪೀಠದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯುವ ನ್ಯಾಯಪೀಠದ ಅಂತರ್ನಿಹಿತ ಅಧಿಕಾರವನ್ನು ಪರಿಮಿತಿಗೊಳಿಸುತ್ತದೆಂದು ಅಥವಾ ಅನ್ಯಥಾ ಬಾಧಿತಗೊಳಿಸುತ್ತದೆಂದು ಭಾವಿಸತಕ್ಕದ್ದಲ್ಲ."*

ಈ ಉಪಬಂಧವು ನ್ಯಾಯೋದ್ದೇಶದ ಈಡೇರಿಕೆಯಾಗುವುದಿದ್ದರೆ, ಮಂಡಲಿಯು ಹೊರಡಿಸಿದ ಆದೇಶಗಳನ್ನು ಪಾಲಿಸದಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಮಂಡಲಿಗೆ ಅಂತರ್ನಿಹಿತ ಅಧಿಕಾರವನ್ನು ಪ್ರದತ್ತಗೊಳಿಸುತ್ತದೆ.

ಆದ್ದರಿಂದ, ಕಂಪನಿ ಕಾನೂನು ಮಂಡಲಿಯು ಮಧ್ಯಂತರವಾಗಿಯಾಗಲಿ ಅಥವಾ ಅಂತಿಮವಾಗಿಯಾಗಲಿ ಹೊರಡಿಸಿದ ಆದೇಶಗಳನ್ನು ಜಾರಿಗೊಳಿಸಲು ಮತ್ತು ಆ ಆದೇಶಗಳನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ ಪಕ್ಷಕಾರನ ವಿರುದ್ಧ ಕ್ರಮ ಕೈಗೊಳ್ಳಲು ಮಂಡಲಿಯು ಅಧಿಕಾರವುಳ್ಳದ್ದಾಗಿದೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಪಕ್ಷಕಾರರು ಕಂಪನಿ ಕಾನೂನು ಮಂಡಲಿಯ ಮುಂದೆ ಹೋಗಿ ಅಗತ್ಯ ಪರಿಹಾರವನ್ನು ಕೋರುವುದು ಸೂಕ್ತವಾಗಿದೆ. ವಾಸ್ತವವಾಗಿ ಈಗಾಗಲೇ ಅಂಥ ಒಂದು ಅರ್ಜಿಯನ್ನು ಸಲ್ಲಿಸಲಾಗಿದ್ದು, ವಾದಗಳನ್ನು ಕೂಡ ಮಂಡಿಸಲಾಗಿದೆಯೆಂದು ವಾದಿಸಲಾಗಿದೆ. ಹಾಗಾಗಿ, ಕಂಪನಿ ಕಾನೂನು ಮಂಡಲಿಯು ಸದರಿ ಅರ್ಜಿಯನ್ನು ಪರಿಗಣಿಸಿ ಸೂಕ್ತ ಆದೇಶಗಳನ್ನು ಹೊರಡಿಸುವುದು ಸಮಂಜಸವಾಗುತ್ತದೆ.

ಮೇಲ್ಕಂಡ ಅಭಿಪ್ರಾಯೋಕ್ತಿಗಳ ಆಧಾರದ ಮೇಲೆ ನ್ಯಾಯಾಂಗ ನಿಂದನೆ ಅರ್ಜಿಯನ್ನು (ಸಿಸಿಸಿ) ವಿಲೆ ಮಾಡಲಾಗಿದೆ.

---